ಅಗತ್ಯವಾದ ಒತ್ತಡವನ್ನು ಹುಟ್ಟಿಸಿ ಸಲೀಸಾಗಿ ಕೆಲಸ ಮುಗಿಸುವುದು ಈ ಮಾದರಿಯ ಯಂತ್ರಗಳ ಹೆಗ್ಗಳಿಕೆ. ನಿತ್ಯ ಜೀವನದಲ್ಲಿ ತಿರುಗಣೆ ಅಥವಾ ಸ್ಕ್ರೂ ಚಲನೆಯ ಬಳಕೆ ಇಂದು ನಿನ್ನೆಯದಲ್ಲ. ಗ್ರೀಕಿನ ಆರ್ಕಿಮಿಡಿಸ್ ನ ಅಲ್ಲದಿದ್ದರೆ ರೋಮನ್ ಯುಗದ ಇನ್ನಾವುದೋ ಮಹಾ ವಿಜ್ಞಾನಿಯ ಹೆಸರು ಸ್ಕ್ರೂ ತಂತ್ರದ ಹಿಂದೆ ಇರಬಹುದು. ಹಾಗಂತ ಅವರ್ಯಾರಿಗೂ ತಿರುಗಣೆ ತಂತ್ರದ ಬಳಕೆ ಮುಂದೊಂದು ದಿವಸ ಶ್ಯಾವಿಗೆ ಒರಳಿನಲ್ಲಿ ಆಗಬಹುದು ಎನ್ನುವ ಕಲ್ಪನೆ ಇದ್ದಿರಲಿಕ್ಕಿಲ್ಲ. ಮತ್ತೆ ಶ್ಯಾವಿಗೆಯನ್ನು ಸೇವಿಸುವ ಭಾಗ್ಯವೂ ಅವರದಲ್ಲ ಬಹುಶಃ. ಬಿಡಿ, ಸಾಮಾನ್ಯವಾಗಿ ಮನೆಯ ಅಟ್ಟದಲ್ಲೋ ಅಡುಗೆಮನೆಯ ನೇಪತ್ಯದಲ್ಲೋ ನಿಷ್ಕ್ರಿಯವಾಗಿರುವ ಆಧುನಿಕ ಲೋಹದ ಒರಳು, ಶ್ಯಾವಿಗೆ ಒತ್ತಬೇಕಾದ ಅಪರೂಪದ ವಿಶೇಷ ದಿನಗಳಲ್ಲಿ ಮಾತ್ರ ಹೊರಬಂದು ಕತ್ತು ಗಿರಗಿರ ತಿರುಗಿಸುವ ಮೂರು ಕಾಲಿನ ವಿಚಿತ್ರ ಜಂತುವಾಗಿ ಜೀವ ಭಾವ ಪಡೆಯುತ್ತದೆ. ಅಡಿಗೆಮನೆಯ ಎರಡು ಕಾಲಿನ ಅವಸರದ ಜಂಗಮರ ಮಧ್ಯೆಯ ಮೂರುಕಾಲಿನ ಶಾಂತ ಸ್ಥಾವರದಂತೆ.

ಒರಳುಗಳು ಲೋಹದಿಂದ ತಯಾರಾಗುವುದಕ್ಕಿಂತ ಮೊದಲು ಸಂಪೂರ್ಣವಾಗಿ ಮರದಿಂದಲೇ ಸಿದ್ಧವಾಗುತ್ತಿದ್ದವಂತೆ. ಮತ್ತೆ ತಿರುಗಣೆ ವ್ಯವಸ್ಥೆಯ ಬದಲು ಭಾರ ಹೇರಿ ಅಥವಾ ಬಲ ಪ್ರಯೋಗಿಸಿ ಕೆಳಮುಖವಾಗಿ ಒತ್ತಬೇಕಿತ್ತಂತೆ. ಕೆಲವು ಮನೆಗಳಲ್ಲಿ ಚಿಕ್ಕ ಮಕ್ಕಳನ್ನು ಹಿಡಿಕೆಯ ಮೇಲೆ ಕೂರಿಸಿ ಶ್ಯಾವಿಗೆ ಒತ್ತಲು ಬೇಕಾದ ಒತ್ತಡ ಉಂಟುಮಾಡುತ್ತಿದ್ದರಂತೆ. ತಿರುಗಣೆ ತಂತ್ರಜ್ಞಾನದ ಲೋಹದ ಒರಳುಗಳು ಸಾಮಾನ್ಯವಾದ ಈ ಕಾಲದಲ್ಲಿ, ಹಿಡಿಯ ಕೆಳಗಿನ ತಿರುಗುವ ಭಾಗಕ್ಕೆ ತೆಂಗಿನ ಎಣ್ಣೆ ಸವರುವುದು ಪ್ರತಿ ಒತ್ತಿಗೂ ಮೇಲೆ ಕೆಳಗೆ ಹೋಗುವಾಗ ಆಗುವ ಘರ್ಷಣೆ ತಗ್ಗುವುದು, ಪರಿಣಾಮವಾಗಿ ಅಮೂಲ್ಯವಾದ ಒರಳಿನ ಆಯಸ್ಸನ್ನು ವರ್ಧಿಸುವುದು ಇವೆಲ್ಲ ಅಡುಗೆಮನೆ ನಿರ್ವಹಿಸುವ ಅನುಭವಸ್ಥರು ತಿಳಿದ ಸತ್ಯಗಳು.

ಹೀಗೆ ಒರಳುಯಂತ್ರದ ಪ್ರವೇಶ ಅಲಂಕಾರ ಆರೈಕೆ ಆಗುತ್ತಿರುವಾಗ ಒಲೆಯ ಮೇಲೆ ಬೆಂದ ಹಿಟ್ಟಿನ ಉಂಡೆಗಳ ಬಿಸಿ ಆರದಂತೆ ಸಣ್ಣ ಬೆಂಕಿ ಮುಂದುವರಿಯುತ್ತಿರುತ್ತದೆ. ಇನ್ನು ಅಕ್ಕಿ ಕಾಯಿಗಳು ಅರೆದು ಬೆಂದ ಉಂಡೆಗಳು ಶ್ಯಾವಿಗೆಯ ಎಳೆಗಳಾಗಿ ಮಾರ್ಪಡುವ ದಿವ್ಯ ಘಳಿಗೆ ಸನ್ನಿಹಿತವಾದಾಗ ಆಯಾ ಮನೆಯ ಬಲಿಷ್ಠ ಒತ್ತುಗಾರರಿಗೆ ಒಂದು ಕೂಗು ಕರೆ ಹೋಗುತ್ತದೆ. ಒಬ್ಬರು ಶ್ಯಾವಿಗೆ ಒರಳಿನ ಒತ್ತು ಪಾತ್ರೆ ಹಿಡಿಯುವಷ್ಟು ಬೆಂದ ಹಿಟ್ಟಿನ ಉಂಡೆಯನ್ನು ಕುಳಿತು ತುಂಬಿಸಿದರೆ ಇನ್ನೊಬ್ಬರು ನಿಂತು, ಒರಳಿನ ಎರಡು ಕಾಲುಗಳನ್ನು ತಮ್ಮ ಪಾದಗಳಿಂದ ಅದುಮಿ ಹಿಡಿದು ಎರಡು ಕೈಯಲ್ಲಿ ಹ್ಯಾಂಡಲ್ ಬಾರ್ ತಿರುಗಿಸುತ್ತಾ ಶ್ಯಾವಿಗೆ ಒತ್ತುತ್ತಾರೆ. 'ಸ್ಟೀಯರಿಂಗ್ ವೀಲ್' ನಂತೆ ತಿರುಗುವ ಒರಳಿನ ಹಿಡಿ, ಎಡಬಲಗಳಿಗೆ ಹೊರಳುವ ಕಾರು ಚಾಲನೆಯ ಮೊದಲ ಪಾಠದಂತಿರುತ್ತದೆ. ಹಿಡಿಯ ಪ್ರತಿ ಸುತ್ತಿಗೂ ಅಷ್ಟಷ್ಟು ಶ್ಯಾವಿಗೆ ಎಳೆಯಾಗಿ ನೂಲಾಗಿ ಒರಳಿನ ಕೆಳಗಿರುವ ಅಚ್ಚಿನಿಂದ ಹೊರ ಬರುತ್ತದೆ, ಕುಳಿತವರು ಪ್ಲೇಟ್ ಅನ್ನು ಎಳೆಗಳು ಹೊರ ಬರುವ ಲಯಕ್ಕೆ ಹೊಂದಿಕೊಂಡು ತಿರುಗಿಸುತ್ತಾ ಸುರುಳಿಯಾಗಿ ಸುತ್ತಿಸಿ ಮುದ್ದೆಯನ್ನು ಹಿಡಿಯುತ್ತಾರೆ.

ಶ್ಯಾವಿಗೆ ಮಾಡುವುದರಲ್ಲಿ ಪಳಗಿರುವ ಅಜ್ಜಿ ಅಮ್ಮ ಹೆಂಡತಿ ದೊಡ್ಡಮ್ಮ ಚಿಕ್ಕಮ್ಮ ಅತ್ತೆ ಅತ್ತಿಗೆ ಹೆಂಡತಿಯಂತಹ ಮಹಾನ್ ಬಾಣಸಿಗರು ಬಿಸಿ ಹಿಟ್ಟಿನ ಮುದ್ದೆಯನ್ನು ಒರಳಿಗೆ ತುಂಬುವ ಮತ್ತೆ ಒತ್ತಿದಾಗ ಕೆಳಗೆ ಧಾರೆಯಾಗಿ ಇಳಿಯುವ ಶ್ಯಾವಿಗೆಯನ್ನು ಪ್ಲೇಟು ಹಿಡಿದು ಸುತ್ತಿಸಿ ಹದ್ದುಬಸ್ತಿನಲ್ಲಿಡುವ ಕೆಲಸ ಮಾಡಿದರೆ, ರಟ್ಟೆಯ ಬಲ ಹೆಚ್ಚಿದೆ ಎನ್ನುವ ಭ್ರಮೆಯಲ್ಲಿ ತೇಲುವ ಮತ್ತೆ ತಿನ್ನುವುದರಲ್ಲೇ ಹೆಚ್ಚಾಗಿ ತಮ್ಮ ಸಿದ್ಧಿ ತೋರುವ ಖ್ಯಾತಿಯ ಗಂಡುಮಗ, ಅಳಿಯ ಮೊಮ್ಮಗನಂತಹವರು ಒರಳು ತಿರುಗಿಸುವ ಹೊಣೆಗಾರಿಕೆಯನ್ನು ನಿರ್ವಹಿಸುತ್ತಾರೆ. ಕೆಲವು ಪ್ರದರ್ಶನಗಲ್ಲಿ ಈ ಪಾತ್ರಗಳು ಬದಲಾಗುವುದು ಒಬ್ಬರೇ ಎರಡು ಮೂರು ಪಾತ್ರ ಮಾಡಬೇಕಾದ ಅನಿವಾರ್ಯತೆ ಬರುವುದೂ ಇರುತ್ತದೆ. 'ಮಾಸ್ ಪ್ರೊಡಕ್ಷನ್' ಕಾರ್ಖಾನೆಯೊಂದರ ನಿರ್ಧರಿತ ನಿಯಮಿತ ಚಲನೆಗಳಂತೆ ಕುಕ್ಕರಿನಲ್ಲಿ ಹದ ಬಿಸಿಯಲ್ಲಿರುವ ಹಿಟ್ಟಿನ ಉಂಡೆಗಳು ಒರಳಿನ ತೂತು ಅಚ್ಚುಗಳ ಮೂಲಕ ಹಾದು ನೀಳ ನೂಲಿನ ಗುಚ್ಛದ ಸ್ವರೂಪವನ್ನು ಪಡೆದು ಪ್ಲೇಟಿನಲ್ಲಿ ಇಳಿದು ಸುತ್ತಿಕೊಂಡು ದೊಡ್ಡ ಪಾತ್ರೆಗೆ ವರ್ಗಾವಣೆ ಆಗುತ್ತಿರುತ್ತವೆ. ಒಂದೊಂದೇ ಶ್ಯಾವಿಗೆ ಮುದ್ದೆಗಳು ಸಿದ್ಧವಾಗುತ್ತಿರುತ್ತವೆ. ಬೇರೆ ಹೊತ್ತಿನಲ್ಲಿ ನಡುವೆ ಎಷ್ಟು ಭಿನ್ನಾಭಿಪ್ರಾಯ ಇದ್ದಿದ್ದರೂ, ಬಹುತೇಕ